**OS.No**.14/2018 **PW**-1

**ದಿನಾಂಕಃ 04.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ನಂ.1(ಎ) ಪರ ಶ್ರೀ. ಕೆ.ಕೆ.ಆರ್ ವಕೀಲರಿಂದ**

ಈ ಪ್ರಕರಣವನ್ನು ನಾನು ಖಾಸಗಿ ವ್ಯಕ್ತಿ ಕೆ.ವಿ.ಶಂಭುಲಿಂಗಪ್ಪರವರ ಮೇಲೆ ಹಾಕಿದ್ದೇನೆ, ಭಾರತ್ ಯೂನಿವರ್ಸಲ್ ಶಿಕ್ಷಣ ತರಬೇತಿ ಕಾಲೇಜಿನ ಮೇಲೆ ಹಾಕಿಲ್ಲ. ದಾವೆ ಸಲ್ಲಿಸುವ ಸಮಯಕ್ಕೆ ಕೆ.ವಿ.ಶಂಭುಲಿಂಗಪ್ಪ, ಕಾರ್ಯದರ್ಶಿ ಭಾರತ್ ಯೂನಿವರ್ಸಲ್ ಶಿಕ್ಷಣ ತರಬೇತಿ ಕಾಲೇಜು ಎಂದು ಅವರನ್ನು 2ನೇ ಪ್ರತಿವಾದಿಯನ್ನಾಗಿ ಸೇರಿಸಿದ್ದೇನೆ ಎಂದರೆ ಸಾಕ್ಷಿ ಅವರ ಪದನಾಮೆ ಆ ರೀತಿ ಇದುದ್ದರಿಂದ ಸೇರಿಸಿದ್ದೇನೆ ಎಂದು ನುಡಿಯುತ್ತಾರೆ. ಕೆ.ವಿ.ಶಂಭಲಿಂಗಪ್ಪರವರು ಭಾರತ್ ಭಾರತ್ ಯೂನಿವರ್ಸಲ್ ಶಿಕ್ಷಣ ತರಬೇತಿ ಕಾಲೇಜಿನ ಕಾರ್ಯದರ್ಶಿಯಾಗಿದ್ದರು ಎಂದರೆ ಸರಿ. ದಾವಾ ಆಸ್ತಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಅದು ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೆ.ವಿ.ಮಂಜುನಾಥ್ ಹಾಗೂ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೆ.ವಿ.ಶುಂಭುಲಿಂಗಪ್ಪರವರ ಜಂಟಿ ಖಾತೆಯಲ್ಲಿತ್ತು ಎಂದು ನುಡಿಯುತ್ತಾರೆ. ನಾನು ದಾವೆ ಸಲ್ಲಿಸುವ ಸಮಯಕ್ಕೆ ದಾವಾ ಆಸ್ತಿ ಭಾರತ್ ಯೂನಿವರ್ಸಲ್ ಶಿಕ್ಷಣ ತರಬೇತಿ ಕಾಲೇಜನ್ನು ಪ್ರತಿನಿಧಿಸುವ ಅದೀಕ್ಷಕ ಕೆ.ವಿ.ಮಂಜುನಾಥ್ ಹಾಗೂ ಕಾರ್ಯದರ್ಶಿ ಕೆ.ವಿ.ಶಂಭುಲಿಂಗಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯನ್ನು ಯಾವ ಕಾರಣಕ್ಕಾಗಿ ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಶಂಭುಲಿಂಗಪ್ಪರವರು ದಾವಾ ಆಸ್ತಿಯ ಖಾತೆಯನ್ನು ಬದಲಾವಣೆ ಮಾಡುವ ಸಲುವಾಗಿ ಪಿಡಿಓ ರವರಿಗೆ ಅರ್ಜಿ ಕೊಟ್ಟಿದ್ದರು, ಹೀಗಾಗಿ ಖಾತೆ ಬದಲಾವಣೆ ಮಾಡಬಾರದು ಎನ್ನುವ ಉದ್ದೇಶಕ್ಕಾಗಿ 2ನೇ ಪ್ರತಿವಾದಿಯನ್ನಾಗಿ ಮಾಡಿದ್ದೇನೆ

ಎಂದು ನುಡಿಯುತ್ತಾರೆ. ನನ್ನ ಪತಿ ಕೆ.ವಿ.ಮಂಜುನಾಥ್ ರವರು ಭಾರತ್ ಯೂನಿವರ್ಸಲ್ ಶಿಕ್ಷಣ ತರಬೇತಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಪತಿ ಭಾರತ್ ಯೂನಿವರ್ಸಲ್ ಶಿಕ್ಷಣ ತರಬೇತಿ ಕಾಲೇಜಿನಲ್ಲಿ ಪ್ರಾಂಶುಪಾಲರು ಎಂದು ಸಂಬಳ ಪಡೆಯುತ್ತಿದ್ದರು ಎಂದರೆ ಗೊತ್ತಿಲ್ಲ. ನನ್ನ ಪತಿ ಮರಣ ಹೊಂದಿದ ಬಗ್ಗೆ ಪಿ.ಎಫ್. ಹಣವನ್ನು ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿ. ನನ್ನ ಪತಿ ತೀರಿಕೊಂಡ ನಂತರ ನಾನು ಅದೇ ಸಂಸ್ಥೆಯಲ್ಲಿ ಸುಮಾರು 10 ವರ್ಷಗಳ ಕಾಲ ಕಾರ್ಯಕಾರಿಣಿ ಸದಸ್ಯೆಯಾಗಿ ಕೆಲಸ ಮಾಡಿದ್ದೇನೆ ಎಂದರೆ ಸರಿ.

ದಾವಾ ಅನುಸೂಚಿ ಸ್ವತಿನಲ್ಲಿರುವ ಕಟ್ಟಡದಲ್ಲಿ ಈಗ ಭಾರತ್ ಯೂನಿವರ್ಸಲ್ ಶಿಕ್ಷಣ ಸಂಸ್ಥೆಯ ತರಗತಿಗಳು ನಡೆಯುತ್ತಿವೆಯಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಪತಿ ತೀರಿಕೊಂಡ ನಂತರ ಭಾರತ್ ಯೂನಿವರ್ಸಲ್ ಸಂಸ್ಥೆಯಿಂದ ಬರುವ ಎಲ್ಲಾ ಸೌಲಭ್ಯಗಳನ್ನು ನಾನು ಮತ್ತು ನನ್ನ ಮಗಳು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖಾಸಗಿ ಒಡೆತನದ ಆಸ್ತಿಯಲ್ಲ, ಅದು ಭಾರತ್ ಯೂನಿವರ್ಸಲ್ ಸಂಸ್ಥೆಯ ಒಡೆತನದಲ್ಲಿದೆ ಎಂದರೆ ಸಾಕ್ಷಿ ಇಲ್ಲ ಅದು ಕೆ.ವಿ.ಮಂಜುನಾಥ್ ಹಾಗೂ ಶಂಭುಲಿಂಗಪ್ಪರವರ ಜಂಟಿ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಕಟ್ಟಡದಲ್ಲಿರುವ ಎಲ್ಲಾ ಕಟ್ಟಡಗಳ ಕಂಪ್ಲೀಶನ್ ಸರ್ಟಿಫೀಕೇಟ್ ಗಳನ್ನು ಭಾರತ್ ಯೂನಿವರ್ಸಲ್ ಸಂಸ್ಥೆಯವರು ಪಡೆದುಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.